

ಮೂಲಿಕೆಯ ಮಾಹಿತಿಯನ್ನು ತಿಳಿಸುವಲ್ಲಿ ಯಾವುದೇ ಗುಟ್ಟು ಇಲ್ಲ!

# ದೈತೋಟ ದಂಪತಿ

## ಆಹಾರದಿಂದ ಆರೋಗ್ಯದ ಅರಿವು ಮೂಡಿಸಿದ ಜೋಡಿ



ವೆಂಕಟರಾಮ – ಜಯಲಕ್ಷ್ಮೀ ದೈತೋಟ ದಂಪತಿ

ದಕ್ಷಿಣ ಕನ್ನಡ ಜಿಲ್ಲೆ ಪಾಣಾಜೆಯ ವೆಂಕಟರಾಮ ದೈತೋಟ ಮತ್ತು ಜಯಲಕ್ಷ್ಮೀ ದೈತೋಟ ದಂಪತಿ ತಮ್ಮ ಬದುಕಿನುದ್ದಕ್ಕೂ 'ಆಹಾರವೇ ಔಷಧಿಯಾಗಬೇಕು' ಎನ್ನುವ ನಂಬಿಕೆ ಹೊಂದಿದವರು ಹಾಗೂ ಆ ನಂಬಿಕೆಯನ್ನು ತಮ್ಮ ಸಂಪರ್ಕಕ್ಕೆ ಬಂದವರೆಲ್ಲರಿಗೆ ಮುಟ್ಟಿಸಲು ಪ್ರಯತ್ನಿಸಿದವರು. ಅವರಿಬ್ಬರ ಕಣ್ಮರೆಯಿಂದ ವ್ಯಕ್ತಿಗಳ ನಷ್ಟವಷ್ಟೇ ಅಲ್ಲ, ಒಂದು ಜೀವನವಿಧಾನವೇ ತೆರೆಮರೆಗೆ ಸರಿದಂತಾಗಿದೆ. ಅದೃಷ್ಟವಶಾತ್ ದೈತೋಟ ದಂಪತಿ ತಮ್ಮ ಅಪಾರ ಜ್ಞಾನದಲ್ಲಿ ಕೆಲವು ಭಾಗವನ್ನಾದರೂ ಬರಹರೂಪದಲ್ಲಿ ಉಳಿಸಿಹೋಗಿದ್ದಾರೆ. ಆದರೆ, ಆ ಜ್ಞಾನವನ್ನು ಹೊಂದುವ, ಅನುಸರಿಸುವ ಸಾವಧಾನ ನಮ್ಮಲ್ಲಿದೆಯೇ?

■ ನಾ. ಕಾರಂತ ಪೆರಾಜೆ